ಕಷವಾಗಿ ಪರಿಶೀಲಿಸಬೇಕಾಗುತ್ತದೆ. ಹಣಕಾಸಿನ ದೃಷ್ಟಿಯಿಂದ ಪರಿಶೀಲನೆ ಮಾಡಬೇಕಾಗುತ್ತದೆ. ಅಲ್ಲಿ ಎಷ್ಟು ಜನ ಬೇಕು ಎಂದು ಸರಿಯಾಗಿ ಅಸೆಸ್ ಮಾಡಿಸಬೇಕಾಗುತ್ತದೆ. ಆದ್ದರಿಂದ ನಾನು ತಕ್ಷಣವೇ ಇಲ್ಲಿ ಉತ್ತರವನ್ನು ಹೇಳುವುದಕ್ಕಾಗುವುದಿಲ್ಲ. ಇವತ್ತು ಇವರಿಗೆ ಈ ಒಂದು ಪರಿಸ್ಥಿತಿ ಬರಬಾರದಾಗಿತ್ತು ಎಂದು ನನಗೂ ಅನಿಸುತ್ತದೆ. ಆದರೆ ಈ ಪರಿಸ್ಥಿತಿಗೆ ಇವರನ್ನು ಯಾರು ತಳ್ಳಿದರೋ ಗೊತ್ತಿಲ್ಲ ಪರಿಸ್ಥಿತಿಯೇ ತಳ್ಳಿತೊ ಅಥವಾ ಬುದ್ಧಿಪೂರ್ವಕವಾಗಿ ಏನಾದರೂ ತೀರ್ಮಾನ ತೆಗೆದುಕೊಂಡರೊ ಹಾಗೆ ಏನೂ ಒಂದು ಆಡ್‌ಹಾಕ್ ಡಿಸಿಷನ್ ಆಯಿತೊ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಹಾಗಾದರೆ ಪರಿಸ್ಥಿತಿಯನ್ನು ಸರಿಪಡಿಸಿ,

ಶ್ರೀ ಕೆ. ಹೆಚ್. ರಂಗನಾಥ್.—ಸರಿಪಡಿಸುವುದಕ್ಕೆ ಪ್ರಯತ್ನ ಮಾಡೋಣ ಆದರೆ ನಾವು ತೆಗೆದುಕೊಳ್ಳುವ ತೀರ್ಮಾನದಿಂದ ಎಲ್ಲರಿಗೂ ಅನುಕೂಲ ಆಗುತ್ತದೆಂದು ನಾನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ನಾನು ಒಂದು ಪ್ರಶ್ನೆ ಕೇಳುತ್ತೇನೆ. ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ನೇಮಕಾತಿಯನ್ನು ಮಾಡುತ್ತೇವೆಂದು ತಾವು ಹೇಳುವುದಾದರೆ, ಪೋಸ್ಟ್‌ಗಳನ್ನು ಸ್ಯಾಂಕ್ಷನ್ ಮಾಡತಕ್ಕದ್ದು ನೋಡಿದರೆ ಬಹುಶಃ ಇನ್ನೂ ಒಂದೆರಡು ವರ್ಷಗಳಕಾಲ ಬೇಕಾಗುತ್ತದೆ. ಆಲ್ಲಿಯವರೆಗೂ ಇವರು ಕೇವಲ ೬೦೦ ರೂಪಾಯಿಗಳಲ್ಲಿಯೇ ದುಡಿಯಬೇಕಾಗುತ್ತದೆ. ಅವರು ಇವತ್ತು ಒಂದು ಸಾವಿರ ರೂಪಾಯಿ ಸಂಬಳ ಕೊಡಿ ಎಂದು ಏನು ಕೇಳಿಕೊಂಡಿದ್ದಾರೆ ಇಷ್ಟು ಕೊಟ್ಟರೂ ನಿಮಗೆ ಜಾಸ್ತಿ ಏನೂ ಆಗುವುದಿಲ್ಲ. ಇವತ್ತು ಫುಲ್ ಟೈಂ ಟೀಚರ್ಸ್‌ಗೆ ೨೫೦೦ ರೂಪಾಯಿ ಕೊಡುತ್ತಿದ್ದೀರಿ, ಇವರಿಗೆ ೧೮೦೦ ರೂಪಾಯಿ ಕೊಟ್ಟರೆ ಏನೂ ಲಾಸ್ ಆಗುವುದಿಲ್ಲ. ದಯವಿಟ್ಟು ಅವರಿಗೆ ೧೦೦೦ ರೂಪಾಯಿ ಸಂಬಳ ಕೊಡುವ ವಿಚಾರವನ್ನು ಒಪ್ಪಿಕೊಳ್ಳಲೇಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಒಪ್ಪಲಿಕ್ಕೆ ತಯಾರಿಲ್ಲ. ೨೮೦೦ ರೂಪಾಯಿ ಸಂಬಳ ಕೊಡಬೇಕಾದರೆ ಆತ ಎಂ. ಎ. ಮಾಡಿಕೊಂಡು ಬಂದಿರುತ್ತಾನೆ ನಾವು ಏಕಾಏಕಿ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಎಷ್ಟು ಪೋಸ್ಟ್‌ಗಳ ಅವಶ್ಯಕತೆ ಇದೆ ಎಂಬುದನ್ನು ಅಸೆಸ್ ಮಾಡಿಕೊಂಡು ತದನಂತರ ನಾವು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದೇ ಹೋದರೆ ಮತ್ತೆ ಯಥಾ ಪ್ರಕಾರ ಈ ಪರಿಸ್ಥಿತಿಗೆ ಅವರನ್ನು ತರತಕ್ಕಂಥಾದ್ದು, ಅವರ ಬೇಡಿಕೆ ಮುಂದಿಡತಕ್ಕಂಥಾದ್ದು, ಅಮರಣಾಂತ ಉಪವಾಸ ಮಾಡತಕ್ಕಂಥಾದ್ದು ಏನಿದೆ ಇದು ಯಾರಿಗೂ ಕೂಡ ಒಳ್ಳೆಯದಲ್ಲ. ಇವತ್ತು ನಾವು ಹಳ್ಳಿಗಾಡಿನಲ್ಲಿ ಕಾಲೇಜುಗಳನ್ನು ತೆರೆಯುತ್ತೇವೆ. ಅಲ್ಲಿಗೆ ಲೆಕ್ಚರರ್ಸ್‌ನ್ನು ನೇಮಕ ಮಾಡುತ್ತೇವೆ. ಹಳ್ಳಿಗಾಡಿನ ಪದವೀಧರರಲ್ಲಿ ಏನು ವಿದ್ಯಾ ಮಟ್ಟ ಇರಬೇಕೋ ಅದು ಇರುವುದಿಲ್ಲ. ಪದವೀಧರರ ವಿದ್ಯಾ ಮಟ್ಟದ ಬಗ್ಗೆ ಮೊನ್ನೆ ಕರ್ನಾಟಕ ಧಾರವಾಡ ಯೂನಿವರ್ಸಿಟಿಯಲ್ಲಿ ಡಾ॥ ಸಿ. ಎನ್. ಆರ್. ರಾವ್ ರವರು ಮಾತನಾಡುತ್ತಾ ನಮ್ಮ ಪರದೇಶಗಳಲ್ಲಿ ಪದವೀಧರರಿಗೆ ಏನು ಬೆಲೆ ಇತ್ತು ಆ ಬೆಲೆ ಕೆಳಗೆ ಹೋಗುತ್ತಾ ಇದೆ ಎನ್ನುವ ಮಾತನ್ನು ಹೇಳುತ್ತಾ ಇದ್ದರು. ಇವತ್ತು ನಾವು ಹಳ್ಳಿಗಾಡಿಗೆ ವಿದ್ಯೆಯನ್ನು ತೆಗೆದುಕೊಂಡು ಹೋಗುತ್ತಿದ್ದೇವೆ. ಅಂತಹ ಪರಿಸ್ಥಿತಿಯಲ್ಲಿ ಇಂತಹ ಒಂದು ಕೆಟ್ಟ ವಿದ್ಯೆಯನ್ನು ತೆಗೆದುಕೊಂಡು ಹೋಗುವುದು ಅಂದರೆ ಅದನ್ನು ಮಾಡುವುದಕ್ಕಿಂತ ಸುಮ್ಮನೆ ಇರುವುದು ಒಳ್ಳೆಯದಾಗುತ್ತದೆ. ಮಾನ್ಯ ಸದಸ್ಯರು ಬಹಳ ಅನುಕಂಪದಿಂದ ಹೇಳುತ್ತಿದ್ದಾರೆ. They are not wage-earners. They are Professors. Lecturers and they are going to train the people. ಅವರು ವೇಜ್ ಅರ್ನರ್ಸ್ ಆದರೆ ನಾವು ಈ ಮಾತನ್ನು ಆಡಬಹುದು ಆದ್ದರಿಂದ ನಾವು ನೋಡತಕ್ಕಂಥ ದೃಷ್ಟಿಕೋನವೇ ಬೇರೆ ಆಗಿರಬೇಕೆಂದು ಮಾನ್ಯ ಸದಸ್ಯರಿಗೆ ಹೇಳುತ್ತಿದ್ದೇನೆ,

ನಿಯಮ ೩೩೪ರ ಮೇರೆಗೆ

೧ ಇಂಡಿಯನ್ ಫ್ಲೈವುಡ್ ಕಂಪನಿಯ ಕಾರ್ಮಿಕರು ಮುಷ್ಕರ ಹೂಡಿರುವುದು

ಶ್ರೀ ಕೆ. ಎಸ್. ಈಶ್ವರಪ್ಪ.—ಮಾನ್ಯ ಅಧ್ಯಕ್ಷರೇ, ಇಂಡಿಯನ್ ಪ್ಲೈವುಡ್ ಕಂಪನಿಯವರದ್ದು ಪ್ಲೈವುಡ್ ಕಾರ್ಖಾನೆಗಳಿದ್ದು (೧) ಧಾರವಾಡ (೨) ದಾಂಡೇಲಿ (೩) ಅಂಗರಕಳು (೪) ನೆಟ್ಟಾಣಿ ಈ ನಾಲ್ಕು ಕಾರ್ಖಾನೆಗಳಲ್ಲಿ ಒಟ್ಟು ೨೫೦೦ ಕಾರ್ಮಿಕರಿದ್ದಾರೆ. ದಿನಾಂಕ ೩೦-೬-೮೯ಕ್ಕೆ

ಕಾರ್ಮಿಕರು ಹಾಗೂ ಮ್ಯಾನೇಜ್‌ಮೆಂಟ್ ಮಧ್ಯೆ ಆದ ಒಪ್ಪಂದ ಮುಗಿದಿದೆ. ಆದರೆ ಮ್ಯಾನೇಜ್‌ಮೆಂಟ್‌ನವರು ಹೊಸ ಒಪ್ಪಂದಕ್ಕೆ ಬರುತ್ತಿಲ್ಲ. ಆದಕಾರಣ ೧೩-೩-೧೯೯೦ ರಿಂದ ಕಾರ್ಮಿಕರು ಸತ್ಯಾಗ್ರಹ ನಡೆಸುತ್ತಿದ್ದಾರೆ.

ಮೂರು ವರ್ಷಗಳ ಹಿಂದೆ ಆದ ವೇಜ್ ಅಗ್ರಿಮೆಂಟ್ ನಂತೆಯೇ ಈಗ ಪಂತ್ಕೊಂದು ಅಗ್ರಿಮೆಂಟ್ ಮಾಡಿಕೊಳ್ಳಿ ಎಂದು ಕಾರ್ಮಿಕರ ಬೇಡಿಕೆ ಇದೆ. ಆದರೆ ಮ್ಯಾನೇಜ್‌ಮೆಂಟ್‌ನವರು ಸರ್ಕಾರ ನಮಗೆ ೧/೧೦ ಟೇಬಲ್‌ನ್ನು ಸಪ್ಲೈ ಮಾಡುತ್ತಿಲ್ಲ. ಆದ್ದರಿಂದ ಹೊಸ ಅಗ್ರಿಮೆಂಟ್ ಮಾಡಿಕೊಳ್ಳಲು ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಸರ್ಕಾರ ೨೫೦೦ ಕಾರ್ಮಿಕರ ಹಿತದೃಷ್ಟಿಯಿಂದ ಮಾಲೀಕರ ಜೊತೆ ಮಾತನಾಡಿ ಅವರಿಗೆ ನ್ಯಾಯ ಒದಗಿಸಿಕೊಡಲು ಮಧ್ಯ ಪ್ರವೇಶ ಮಾಡಬೇಕೆಂಬ ವಿಷಯದ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇಂಡಿಯನ್ ಪ್ಲೈವುಡ್ ಕಾರ್ಖಾನೆಯ ನೌಕರರ ಮಂಷ್ಕರದ ಬಗ್ಗೆ ಏನು ವಿಚಾರ ಎತ್ತಿದ್ದಾರೆ, ಈ ಬಗ್ಗೆ ಸಂಬಂಧಪಟ್ಟ ಸನ್ಮಾನ್ಯ ಸಚಿವರಿಗೆ ಹೇಳಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲು ತಿಳಿಸುತ್ತೇನೆ.

೨ ಉಳ್ಳಾಲದಲ್ಲಿರುವ ಪೋಲೀಸ್ ಸ್ಟೇಷನ್ನಿಗೆ ಹೆಚ್ಚಿನ ಸಿಬ್ಬಂದಿಯನ್ನು ನೇಮಕ ಮಾಡುವುದು.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಉಳ್ಳಾಲದಲ್ಲಿರುವ ಪೋಲೀಸ್ ಸ್ಟೇಷನ್ ಸುಮಾರು ಒಂದು ಲಕ್ಷ ಜನರ ಪರಿಮಿತಿಯ ಉಸ್ತುವಾರಿ ನೋಡಿಕೊಳ್ಳಬೇಕಾಗಿದೆ. ಅನೇಕ ರೀತಿಯ ತಕ್ಷೀರುಗಳು, ಹಿಂದೂ ಮುಸ್ಲಿಮ್ ಕ್ಲೇಶಗಳು ಈ ಭಾಗದಲ್ಲಿ ಆಗಾಗ ಜರುಗುತ್ತಲಿವೆ. ಇಂತಹ ಪರಿಸ್ಥಿತಿಯಲ್ಲಿ ಈ ಪೋಲೀಸು ಸ್ಟೇಷನ್ನಿನಲ್ಲಿ ಬರೀ ೧೨ ಜನ ಮಾತ್ರ ಪೋಲೀಸರಿದ್ದಾರೆ. ಇದು ಏನೇನೂ ಸಾಕಾಗುವುದಿಲ್ಲ. ಕಳೆದ ೩ ವರ್ಷಗಳಿಂದ ಈ ಸ್ಟೇಷನ್ನಿಗೆ ೧೫ ಮಂದಿ ಹೆಚ್ಚಿಗೆ ಪೋಲೀಸರನ್ನು ನೇಮಕ ಮಾಡಬೇಕೆಂದು ಕೇಳುತ್ತಾ ಬಂದರೂ ಇನ್ನೂ ನೇಮಕವಾಗಿಲ್ಲ. ಇದರಿಂದಾಗಿ ತುಂಬಾ ತೊಂದರೆ, ಕಷ್ಟಗಳು ಉಂಟಾಗಿರುತ್ತವೆ. ೨೦ ಗ್ರಾಮಗಳು ಇದಕ್ಕೆ ಒಳಪಟ್ಟಿರುತ್ತದೆ. ಆದಕಾರಣ, ಉಳ್ಳಾಲ ಪೋಲೀಸ್ ಸ್ಟೇಷನ್ನಿಗೆ ಕನಿಷ್ಠ ೧೦ ಜನ ಹೆಚ್ಚಿಗೆ ಪೋಲೀಸರ ನೇಮಕವನ್ನು ಆಗತ್ಯವಾಗಿ ಮಾಡುವಂತಾಗಬೇಕು. ಈ ಕುರಿತು ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ೨೯-೧೧-೧೯೮೬ ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಮಂಗಳೂರು ಎಜ್ಯುಕೇಷನ್ ಸೆಂಟರ್‌ನ ಸಿಲ್ವರ್ ಜುಬಿಲಿಯ ಸಮಾರಂಭದಲ್ಲಿ ಭಾಗವಹಿಸಲು ಹೋದ ಸಂದರ್ಭದಲ್ಲಿ ಉಳ್ಳಾಲ ಪೋಲೀಸ್ ಸ್ಟೇಷನ್ ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸುತ್ತೇನೆಂದು ಹೇಳಿದ್ದರು. ಆದರೆ ಈಗ ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸುವ ವಿಚಾರದಲ್ಲಿ ಹಣಕಾಸಿನ ತೊಂದರೆ ಇರುವುದರಿಂದ ಈ ಒಂದು ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಿಸುವಂಥ ಕೆಲಸವನ್ನು ಹಂತಹಂತವಾಗಿ ಮಾಡಲಿಕ್ಕೆ ಸರ್ಕಾರ ಆಲೋಚನೆ ಮಾಡುತ್ತಾ ಇದೆ. ಇದನ್ನು ಹೆಚ್ಚುವರಿ ಮಾಡಲಿಕ್ಕೆ ಸರ್ಕಾರದ ಮುಂದೆ ಪ್ರಸ್ತಾವ ಈ ರೀತಿ ಇದೆ. ಒಂದು ಹೆಚ್ಚುವರಿ ಸಬ್‌ಇನ್‌ಸ್ಪೆಕ್ಟರ್ ಒಂದು ಹೆಚ್ಚುವರಿ ಅಸಿಸ್ಟೆಂಟ್ ಸಬ್‌ಇನ್‌ಸ್ಪೆಕ್ಟರ್, ಎರಡು ಹೆಡ್‌ಕಾನ್‌ಸ್ಟೇಬಲ್ಸ್, ಮತ್ತು ೧೦ ಪೋಲೀಸ್ ಕಾನ್‌ಸ್ಟೇಬಲ್ಸ್. ಇಷ್ಟು ಸಂಖ್ಯೆಯನ್ನು ಹೆಚ್ಚುವರಿ ಮಾಡಬೇಕೆಂಬ ಪ್ರಸ್ತಾವ ಸರ್ಕಾರದ ಮುಂದೆ ಇದೆ. ಅದನ್ನು ಆದಷ್ಟು ಜಾಗ್ರತೆ ಮಂಜೂರು ಮಾಡುವುದಕ್ಕೆ ಎಲ್ಲಾ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

೩ ಸಹಕಾರ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು ಹಾಗೂ ನೌಕರರ ಸೇವಾಹಿರಿತನ ಇತ್ಯಾದಿ ಬಗ್ಗೆ

ಶ್ರೀ ಜೆ. ಹೆಚ್. ಪಾಟೀಲ.—ಮಾನ್ಯ ಅಧ್ಯಕ್ಷರೇ,

೧) ಸಹಕಾರ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು ?

೨) ಯಾವ ಯಾವ ಹಂತದಲ್ಲಿ ಎಷ್ಟು ಖಾಲಿ ಹುದ್ದೆಗಳಿವೆ ?

೩) ಇವುಗಳಲ್ಲಿ ನೇರವಾಗಿ ನೇಮಿಸಬೇಕಾಗಿರುವ ಹುದ್ದೆಗಳು ಎಷ್ಟು ?

೪) ಬಡ್ತಿ ನೀಡಿ ಭರ್ತಿ ಮಾಡುವ ಹುದ್ದೆಗಳು ಎಷ್ಟು ?